ಸಾಕ್ಷಿಯನ್ನು ದಿನಾಂಕ **30-06-2022** ರಂದು ಕರೆದು ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಶ್ರೀ.ಜಿ.ಎಂ.ಐ.ವಕೀಲರಿಂದಃ

ನನ್ನ ಸಾಕ್ಷ್ಯದ ಹೇಳಿಕೆಯನ್ನು ಪ್ರಮಾಣಪತ್ರದ ರೂಪದಲ್ಲಿ ನನ್ನ ಹೇಳಿಕೆಯಂತೆ ತಯಾರಿಸಿ ಸಲ್ಲಿಸಿದ್ದು ಅದರಲ್ಲಿರುವ ವಿಚಾರಗಳು ಸತ್ಯವಾಗಿರುತ್ತವೆ. ಸದರಿ ಈ ಪ್ರಮಾಣಪತ್ರದಲ್ಲಿರುವ ಸಹಿ ನನ್ನದೇ ಇರುತ್ತದೆ.

ಸಾಕ್ಷಿ ನಿಡಿ 1 ದಾಖಲೆಯನ್ನು ನೋಡಿ ಅದರಲ್ಲಿರುವ ತನ್ನ ಸಹಿಯನ್ನು ಗುರುತಿಸಿದ್ದು ಸಹಿಯನ್ನು ನಿಡಿ 1 (ಜಿ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ** ಶ್ರೀ.ಟಿ ಎನ್ ಎಸ್ ವಕೀಲರಿಂದಃ

ನಾನು ದ್ವಿತೀಯ ಪಿಯುಸಿ ಯುವರೆಗೂ ಕಲಿತಿದ್ದೇನೆ. ನಾನು 3 ವರ್ಷ ತಿಪ್ಪಯ್ಯ ವಕೀಲರ ಬಳಿ ಗುಮಾಸ್ತನಾಗಿ ಕೆಲಸ ಮಾಡಿದ್ದೇನೆ. ನನ್ನ ಮೇಲೆ ಹಿಂದೆ ಕೋಲೆ ಪ್ರಕರಣ ದಾಖಲಾಗಿತ್ತು. ನಾನು ನ್ಯಾಯಾಲಯಕ್ಕೆ 20 ವರ್ಷಗಳಿಂದ ಬರುತ್ತಿದ್ದೇನೆ. ನನಗೆ ಪ್ರತಿವಾದಿಗಳ ಪರಿಚಯ ಇಲ್ಲ. ನನಗೆ ಕೋಕಿಲಮ್ಮನವರವ ಪರಿಚಯ ಇದೆ ಎಂದು ಸಾಕ್ಷಿ ಸ್ವತಃ ನುಡಿಯುತ್ತಾರೆ. ಪ್ರತಿವಾದಿಗಳನ್ನು ನಾನು ಇಲ್ಲಿಯವೆರೆಗೂ ನೋಡಿಲ್ಲ. ಪ್ರಮಾಣಪತ್ರದಲ್ಲಿ ಇರುವ ವಿಚಾರಗಳನ್ನು ನಾನು ತಿಳಿದುಕೊಂಡಿದ್ದೇನೆ.

2. ಪ್ರತಿವಾದಿಗಳು ನನಗೆ ಗೊತ್ತು ಎಂದು ಪ್ರಮಾಣ ಪತ್ರದಲ್ಲಿ ಬರೆಸಿದ್ದೀರಾ ಎಂದರೆ ಸಾಕ್ಷಿ ಪತ್ರವನ್ನು ಓದಿ ನೋಡಿ ಗೊತ್ತು ಎಂದು ಬರೆಸಿದ್ದೇನೆ ಎಂದು ನುಡಿಯುತ್ತಾರೆ. ದಾನಪತ್ರವನ್ನು ನೋಡಿ ಪ್ರತಿವಾದಿಗಳು ನನಗೆ ಗೊತ್ತು ಎಂದು ಪ್ರಮಾಣ ಪತ್ರದಲ್ಲಿ ಬರೆಸಿದ್ದೇನೆ. ಈಗ ನಾನು ಸಹಿಯನ್ನು ಗುರುತಿಸಿದ ಪತ್ರವೇ ಆ ದಾನಪತ್ರವಾಗಿರುತ್ತದೆ. ನಿಡಿ 1 ದಾಖಲೆಯನ್ನು ನಾನು 02.04.2007 ರಲ್ಲಿ ನೋಡಿದ್ದು ಮತ್ತೇ ನೋಡಿಲ್ಲ.

3. ಪ್ರಮಾಣ ಪತ್ರವನ್ನು ವಕೀಲರ ಕಚೇರಿಯಲ್ಲಿ ಬರೆಸಿದ್ದೇನೆ. ವಕೀಲರು ಕರೆ ಮಾಡಿ ತಿಳಿಸಿದ್ದರಿಂದ ನಾನು ಅವರ ಕೆಚೇರಿಗೆ ಹೋಗಿದ್ದೆ. ಪ್ರಮಾಣ ಪತ್ರಕ್ಕೆ ಸಹಿ ಮಾಡುವಾಗ ದಿನಾಂಕ 02.04.2007 ರ ದಾನಪತ್ರವನ್ನು ನಾನು ಓದಿಲ್ಲ ಕೋಕಿಲಮ್ಮನವರಿಗೆ ತಮಿಳು ಭಾಷೆ ಮಾತನಾಡುವುದನ್ನು ಬಿಟ್ಟು ಬೇರ ಭಾಷೆ ಬರುತ್ತಿರಲಿಲ್ಲ ಎಂದರೆ ಸಾಕ್ಷಿ ತೆಲುಗು ಭಾಷೆ ಅವರಿಗೆ ಬರುತ್ತಿತ್ತು ಎಂದು ನುಡಿಯುತ್ತಾರೆ.

4. ಕೋಕಿಲಮ್ಮನವರನ್ನು ಮೊದಲ ಬಾರಿಗೆ 2004 ರಲ್ಲಿ ನೋಡಿದ್ದೆ. ನಾನು ಟ್ರಾಕ್ಟರ್ ಹೊಂದಿದ್ದು ಇಟ್ಟಿಗೆಯನ್ನು ಸಾಗಿಸುತ್ತಿದ್ದೆ ಆ ಸಮಯದಲ್ಲಿ ಕೋಕಿಲಮ್ಮನವರ ಪರಿಯವಾಗಿರುತ್ತದೆ. ಕೋಕಿಲಮ್ಮನವರ ಗಂಡ ಜಾನಕಿರಾಮ ಇಟ್ಟಿಗೆ ಕಾರ್ಖಾನೆಯನ್ನು 1994 ರವರೆಗೂ ನಡೆಸಿ ನಂತರ ನಿಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಜಾನಕೀರಾಮ ರವರ ಕುಟುಂಬದಲ್ಲಿ ವ್ಯತ್ಯಾಸ ಬಂದು ದಿನಾಂಕ 22.06.1996 ರಲ್ಲಿ ಪಾಲು ವಿಭಾಗ ಮಾಡಿಕೊಂಡಿದ್ದರು ಎಂದರೆ ನನಗೆ ಗೊತ್ತಿಲ್ಲ. ದಿನಾಂಕ 22.06.1996 ರ ನಂತರ ಕೋಕಿಲಮ್ಮ ಮತ್ತು ಜಾನಕೀ ರಾಮ ರವರಿಗೆ ಯಾವುದೇ ಆದಾಯ ಇಲ್ಲದೇ ಇದ್ದರಿಂದ ಅವರ ಮಕ್ಕಳು ಕೊಡುತ್ತಿದ್ದ ಹಣದಿಂದ ಜೀವನವನ್ನು ನಡೆಸುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ.

5. ನಾನು ವಕೀಲರ ಬಳಿ ಗುಮಾಸ್ತನಾಗಿ ಕೆಲಸ ಮಾಡುತ್ತಿದ್ದಾಗ ಕೋಕಿಲಮ್ಮ ಮತ್ತು ಜಾನಕೀರಾಮ್ ರವರು ಜೀವನಾಂಶ ಕೋರಿ ಅವರ ಮಕ್ಕಳ ಮೇಲೆ ಕೇಸನ್ನು ಹಾಕಿದ ವಿಚಾರ ನನಗೆ ತಿಳಿಸಿಲ್ಲ. ದಾನಪತ್ರವನ್ನು ಬರೆಯುವ ದಿನದಂದು ದಿನಾಂಕ 22.06.1996 ರ ವಿಭಾಗ ಪತ್ರವನ್ನು ತಂದಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ ದಾನ ಪತ್ರವನ್ನು ಬರೆಸುವಾಗಿ ಯಾವ ಪತ್ರವನ್ನು ಬಂದಿದ್ದರು ಎಂದು ನನಗೆ ಗೊತ್ತಿಲ್ಲ

6. ನಾನು ತಾಲ್ಲೂಕು ಕಚೇರಿ ಬಳಿ ಇದ್ದಾಗ ಕೋಕಿಲಮ್ಮನವರು ನನಗೆ ಪರಿಚಯ ಇದ್ದುದ್ದರಿಂದ ತಯಾರಾಗಿದ್ದ ದಾಖಲೆಗೆ ನಾನು ಸಹಿ ಮಾಡಿದ್ದೆ. ಸಾಕ್ಷಿಯಾಗಿ ಸಹಿ ಮಾಡುವಂತೆ ನನ್ನನ್ನು ಯಾರು ಕರೆದಿಲ್ಲ. ನೀವು ಹೋಗುವುದಕ್ಕೂ ಮೊದಲು ಎಷ್ಟು ಜನ ಸಹಿ ಮಾಡಿದ್ದರು ಎಂಬ ಪ್ರಶ್ನೆಗೆ ಸಾಕ್ಷಿ ಮೊದಲು ಕೋಕಿಲಮ್ಮ ಸಹಿ ಮಾಡಿದ್ದರು, ನಂತರ 1 ನೇ ಪ್ರತಿವಾದಿ ಸಹಿ ಮಾಡಿದ್ದರು, ಶ್ರೀನಿವಾಸ ರವರು ಸಹಿ ಮಾಡಿದ್ದರು, ಸತೀಶ್ ರೆಡ್ಡಿ ನಂತರ ನಾನು ಸಹಿ ಮಾಡಿದ್ದೆ ನಂತರ ನರಸಿಂಹರೆಡ್ಡಿ ಸಹಿ ಮಾಡಿದ್ದರು ಎಂದು ನುಡಿಯುತ್ತಾರೆ.

7. ನಾನು ಹೋಗಿದ ನಂತರ ಯಾರು ಆ ದಾಖಲೆಗೆ ಸಹಿ ಮಾಡಿದ್ದರು ಎಂದು ನಾನು ನೋಡಿಲ್ಲ. ನಾನು ಸಹಿಯನ್ನು ಸ್ಟಾಂಪ್ ವೆಂಡಾರ್ ರವರ ಬಳಿ ಅವರು ಟೈಪ್ ಮಾಡಿ ಇಟ್ಟುಕೊಂಡ ದಾಖಲೆಗೆ, ಓದಿ ತಿಳಿಸಿದ ದಾಖಲೆಗೆ ಮಾಡಿದ್ದೆ. ನಾನು ಸಹಿಯನ್ನು ಮಾಡಿ ಬಂದಿದ್ದೆ. ನಾನು ಸ್ಥಳದಲ್ಲಿ 20 ನಿಮಿಷ ಇದ್ದೆ. ಕೋಕಿಲಮ್ಮ ಸೊಣ್ಣಶೆಟ್ಟಿ ಹಳ್ಳಿಯಲ್ಲಿ ವಾಸವಾಗಿದ್ದರು. ಸೊಣ್ಣಶೆಟ್ಟಿಹಳ್ಳಿಯಲ್ಲಿ ಯಾರ ಜೊತೆ ವಾಸವಿದ್ದರು ಎಂದು ನನಗೆ ಗೊತ್ತಿಲ್ಲ.

8. ಸರ್ವೀಸ್ ಸ್ಟೇಷನ್ ನನ್ನು 20-25 ವರ್ಷಗಳಿಂದ ನೋಡುತ್ತಿದ್ದೇನೆ. ಸದರಿ ಸರ್ವೀಸ್ ಸ್ಟೇಷನ್ ನನ್ನು ಯಾರು ನಡೆಸುತ್ತಿದ್ದರು ಎಂದು ನನಗೆ ಗೊತ್ತಿಲ್ಲ. ದಾವಾ ಸ್ವತ್ತನ್ನು ನಾನು ನೋಡಿದ್ದೇನೆ. ಅದರ ಚೆಕ್ಕುಬಂದಿ, ವಿಸ್ತೀರ್ಣ ನನಗೆ ಗೊತ್ತಿಲ್ಲ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಕೋಕಿಲಮ್ಮನವರ ಎಡಗೈ ಹೆಬ್ಬೆಟ್ಟಿನ ಗುರುತನ್ನು ಗುರುತಿಸಬಲ್ಲೆ ಎಂದು ಬರೆಸಿದ್ದೇನೆ. ಕೋಕಿಲಮ್ಮನವರು ನನ್ನ ಎದುರುರಿಗೆ ಹೆಬ್ಬೆಟ್ಟಿನ ಗುರುತನ್ನು ಹಾಕಿಲ್ಲ. ನಾನು ಮತ್ತು ಪ್ರತಿವಾದಿಗಳು ಸೇರಿಕೊಂಡು ನಿಡಿ 1 ರ ದಾಖಲೆಯನ್ನು ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ.

9. ಗೌರಪ್ಪ ಎಂಬುವವರನ್ನು ನೋಡಿದ್ದೇನೆ. ಅವರು ಸ್ಟಾಂಪ್ ವೆಂಡಾರ್ ಎಂದು ನನಗೆ ಗೊತ್ತು. ಗೌರಪ್ಪರವರನ್ನು 20 ವರ್ಷಗಳ ಹಿಂದೆ ನೋಡಿದ್ದೇನೆ. ಗೌರಪ್ಪರವರು ಸತ್ತಿದಾರೋ ಬದುಕಿದ್ದಾರೋ ಎಂಬ ಬಗ್ಗೆ ನಾನು ವಿಚಾರಿಸಿಲ್ಲ. ಪ್ರತಿವಾದಿಗಳು ಹೇಳಿಕೊಟ್ಟಂತೆ ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲಃ**

ನನ್ನ ಉಕ್ತಲೇಖನದ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೆ.ಕೇ.ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಚಿಂತಾಮಣಿ